‘ಓಪನ್ ಹಾರ್ಟ್’ ಕಾರ್ಯಕ್ರಮದಲ್ಲಿ ಮಾಜಿ ರಾಷ್ಟ್ರಪತಿ ಕೋವಿಂದ್

# ‘ಸಂಸ್ಕೃತಿಯ ಬೇರು ಉಳಿಸಿಕೊಳ್ಳಿ’



ನಗರದ ಸೇಂಟ್ ಜೋಸೆಫ್ ವಿಶ್ವವಿದ್ಯಾಲಯದಲ್ಲಿ ಸೋಮವಾರ ನಡೆದ ‘ಓಪನ್ ಹಾರ್ಟ್’ ಕಾರ್ಯಕ್ರಮದಲ್ಲಿ ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಮತ್ತು ವಿಶ್ವವಿದ್ಯಾಲಯದ ಕುಲಪತಿ ಫಾ. ವಿಕ್ಟರ್‌ಲೋಬೊ ಅವರು ಮಾತುಕತೆಯಲ್ಲಿ ತೊಡಗಿದ್ದರು. ವಿಶ್ವವಿದ್ಯಾಲಯದ ಸಾರ್ವಜನಿಕ ಸಂಪರ್ಕ ಅಧಿಕಾರಿ ಕಿರಣ್ ಜೀವನ್, ಕುಲಸಚಿವ ಮೆಲ್ವಿನ್ ಕೊಲಸೊ, ಸಹಕುಲಪತಿ ರೊನಾಲ್ಡ್ ಜೆ. ಮಸ್ಕರೇನಸ್, ಐಐಟಿ ನಿರ್ದೇಶಕ ಫಾ. ಡೆಂಜಿಲ್ ಲೋಬೊ, ಸಹಕುಲಪತಿ ರೆಜಿನಾ ಮಥಾಯಿಸ್ ಭಾಗವಹಿಸಿದ್ದರು.

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತವು ಅದ್ಭುತ ಸಾಧನೆಗಳನ್ನು ಮಾಡುತ್ತಿದೆ. ಆಧುನಿಕತೆ ಮತ್ತು ವೈಚಾರಿಕತೆಯನ್ನು ಅಳವಡಿಸಿಕೊಳ್ಳುತ್ತಿದೆ. ನಮ್ಮ ಸಂಸ್ಕೃತಿಯ ಬೇರುಗಳನ್ನು ಉಳಿಸಿಕೊಂಡೇ ಆಧುನಿಕತೆಗೆ ತೆರೆದುಕೊಳ್ಳಬೇಕು’ ಎಂದು ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಸಲಹೆ ನೀಡಿದರು.

ನಗರದ ಸೇಂಟ್ ಜೋಸೆಫ್ ವಿಶ್ವವಿದ್ಯಾಲಯದಲ್ಲಿ ಸೋಮವಾರ ನಡೆದ ‘ಓಪನ್ ಹಾರ್ಟ್’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಆಧುನಿಕತೆ ಎನ್ನುವುದು ಮೇಲೆ ಕಾಣುವ ಮರದಂತೆ. ಸಂಸ್ಕೃತಿ, ಪರಂಪರೆ ಎನ್ನುವುದು ಭೂಮಿಯಾಳಕ್ಕೆ ಇಳಿದ ಬೇರುಗಳಂತೆ. ಬೇರು ಗಟ್ಟಿಯಾಗಿದ್ದಾಗ ಎಂಥ ಗಾಳಿ ಬಂದರೂ ಮರ ಬೀಳುವುದಿಲ್ಲ. ಅದೇ ರೀತಿ ನಮ್ಮ ಸಂಸ್ಕೃತಿಯ ಬೇರುಗಳನ್ನು ಗಟ್ಟಿಮಾಡಿಕೊಂಡೇ ನೀವು ಆಧುನಿಕರಾಗಿ. ಆಗ ಯಾವುದೇ ರೀತಿಯ ಸವಾಲುಗಳು ಬಂದರೂ ಎದುರಿಸಲು ಈ ಬೇರು ಸಹಾಯಕವಾಗುತ್ತದೆ’ ಎಂದು ವಿಶ್ಲೇಷಿಸಿದರು.

‘ಹೆಲಿಕಾಪ್ಟರ್‌ಗಳನ್ನು, ವಿಮಾನಗಳನ್ನು ನಾವೇ ತಯಾರಿಸುತ್ತಿದ್ದೇವೆ. ಬಾಹ್ಯಾಕಾಶ ಕ್ಷೇತ್ರದಲ್ಲಿ ಅಗಾಧ ಪ್ರಗತಿ ಸಾಧಿಸಿದ್ದೇವೆ. ಚಂದ್ರನ ದಕ್ಷಿಣ ಧ್ರುವದಲ್ಲಿ ಗಗನನೌಕೆ ಇಳಿಸಿದ ಮೊದಲ ದೇಶ ನಮ್ಮದು. ಚಂದ್ರನ ಮೇಲೆ ಯಶಸ್ವಿಯಾಗಿ ಇಳಿದ ಕೆಲವೇ ರಾಷ್ಟ್ರಗಳಲ್ಲಿ ಭಾರತವೂ ಒಂದು ಎಂಬ ಹಿರಿಮೆ ನಮ್ಮದು. ಚಂದ್ರಯಾನ-3 ಮತ್ತು ಆದಿತ್ಯ ಎಲ್-1 ಮಿಷನ್‌ನಿಂದಾಗಿ ಭಾರತದ ಚಿತ್ರಣವೇ ಬದಲಾಯಿತು. ಜಿ-20 ಶೃಂಗಸಭೆಯ ಆತಿಥ್ಯ ವಹಿಸುವ ಅವಕಾಶವೂ ಭಾರತಕ್ಕೆ ದೊರಕಿತು’ ಎಂದು ಶ್ಲಾಘಿಸಿದರು.

‘ಡಿಜಿಟಲ್ ಕ್ರಾಂತಿಯಿಂದಾಗಿ ಇಂದು ಬ್ಯಾಂಕ್ ಮನೆ ಮನೆಗೆ ತಲುಪಿದೆ. ಕುಳಿತಲ್ಲಿಂದಲೇ ಹಣ ವರ್ಗಾವಣೆ, ವ್ಯವಹಾರ ನಡೆಸಲು ಇದು ಕಾರಣವಾಗಿದೆ’ ಎಂದರು.

‘ಸ್ಪರ್ಧಾತ್ಮಕ ಜಗತ್ತಿನಲ್ಲಿ ಎಲ್ಲರೂ ಓಡಬೇಕು. ಜೀವನದ ಓಟದಲ್ಲಿ ಯಾವುದೇ ಸವಾಲು ಬಂದರೂ ಬೆನ್ನು ಹಾಕದೇ ಎದುರಿಸುವ ಆತ್ಮಸ್ಥೈರ್ಯ ಇರಬೇಕು. ನಿಮ್ಮ ಯೋಚನೆ, ನಿರ್ಧಾರ ಮತ್ತು ಕ್ರಿಯೆ ಸಕಾರಾತ್ಮಕವಾಗಿ ಇದ್ದರೆ ಫಲಿತಾಂಶವೂ ಸಕಾರಾತ್ಮಕವಾಗಿರುತ್ತದೆ. ಯಶಸ್ಸು ಗಳಿಸಲು ಸಾಧ್ಯವಾಗುತ್ತದೆ’ ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

‘ಹಿರಿಯರನ್ನು, ಗುರುಗಳನ್ನು ಗೌರವಿಸುವುದು ನಮ್ಮ ಸಂಸ್ಕೃತಿ. ಅದನ್ನು ಯಾವತ್ತೂ ಬಿಡಬಾರದು. ನೀವೇ ಸಾಧಕರಾಗಬೇಕು. ಸಾಂಸ್ಕೃತಿಕ ರಾಯಭಾರಿಗಳೂ ಆಗಬೇಕು’ ಎಂದು ಆಶಿಸಿದರು.